# ವಿವರಣೆ: <u>ದುಗ್ಗಾಣಿ ಎಂಬುದು ದುರ್ಜನ ಸಂಗ</u>

Ref.:
https://raocollectionssongs.blogspot.com/search/label/%E0%B2%A6%E0%B3%81%E0%B2%97%E0%B3%8D%E0%B2%97%E0%B2%BE%E0%B2%A3%E0%B2%BF%20%E0%B2%8E%E0%B2%82%E0%B2%AC%E0%B3%81%E0%B2%A6%E0%B3%81%20%E0%B2%A6%E0%B3%81%E0%B2%B0%E0%B3%8D%E0%B2%9C%E0%B2%A8%20%E0%B2%B8%E0%B2%82%E0%B2%97%20%E0%B2%A6%E0%B3%81%E0%B2%97%E0%B3%8D%E0%B2%97%E0%B2%BE%E0%B2%A3%E0%B2%BF%20%E0%B2%AC%E0%B2%B2%E0%B3%81%20purandara%20vittala%20DUGGAANI%20EMBUDU%20DURJANA%20SANGA%20DUGGAANI%20BALU

ದುಗ್ಗಾಣಿ ಎನ್ನುವುದು ದುರ್ಜನರ ಸಂಗ

ಪುರಂದರ ದಾಸರು ಮುಟ್ಟದ ವಿಷಯಗಳಿಲ್ಲ. ಬಾದರಾಯಣ ಬೋಧವನ್ನು ನಾದದ ಮೂಲಕ ಒಣಿ ಒಣಿಗೆ ತಲುಪಿಸಿದವರು. ವೇದವೇದ್ಯನ ವಿಚಾರ ಜನಪದಕ್ಕೆ ತಲುಪಿಸಲು ಬೀದಿಗೆ ಬಿದ್ದವರು.

ದುಗ್ಗಾಣಿ ಎನ್ನುವುದು ದುರ್ಜನರ ಸಂಗ ಎಂಬುದು ಕಟು ಸತ್ಯ. ಹಣವೆಂಬುದು ತೃಣಕ್ಕೆ ಸಮಾನ ಅದನ್ನು ಕೃಷ್ಣಾರ್ಪಣ ಎಂದು ಸಂಕರ್ಷಣನ ಕಾಣ ಹೊರಟವರು ದಾಸರು.

ಹಣ ಅವಶ್ಯಕತೆ. ಅತೀ ಅನಿವಾರ್ಯವೇನಲ್ಲ. ಮಾಡುವ ಊಟದ ರುಚಿ ಪರಿಶ್ರಮದಲ್ಲಿದೆ. ಬಡಿಸುವರ ಪ್ರೇಮದಲ್ಲಿದೆ. ಹಣದ ಹೂರಣ ಅದು ಬರುವ ಮಾರ್ಗದಲ್ಲಿದೆ. ತರುವ ಸಂತೋಷದಲ್ಲಿದೆ. ಇರುವ ತೃಪ್ತಿಯಲ್ಲಿದೆ.

ವ್ಯವಧಾನ-ಸಮಾಧಾನವಿಲ್ಲದ ಬದುಕು ನಿಸ್ಸಾರವಾಗುತ್ತದೆ. ಅನ್ಯಾಯದಿಂದ ಬಂದ, ಆತ್ಮಸಾಕ್ಷಿ ಒಪ್ಪದ, ಹೊತ್ತಿಗಾಗದ, ಸಂತೃಪ್ತಿ ತರದ ಹಣ ದುಗ್ಗಾಣಿ ಎನಿಸುತ್ತದೆ.

ಇಂಥ ದುಗ್ಗಾಣಿ ಎಂಬುದು ದುರ್ಜನರ ಸಂಗ. ಇದು ನೆಂಟರ ಮಾಡಿಸುತ್ತದೆ ಕೆಡಿಸುತ್ತದೆ. ಮಾನ ಕೊಡಿಸುತ್ತದೆ-ಕಳೆಯುತ್ತದೆ.

ಇಹ-ಪರಕ್ಕೂ ಆಪತ್ತು ತರದ ದ್ರವ್ಯ ಅದು ಸಂಪತ್ತು. ಪುಣ್ಯ ಸಾಧನದ ಸಂಪತ್ತು ದೊಡ್ಡದು. ಸಿರಿ ರಮಣನ ಕರುಣೆಯೇ ಬೆಲೆ ಕಟ್ಟಲಾಗದ ಸಂಪತ್ತು. ದುಗ್ಗಾಣಿಯನ್ನು ತೊರೆದಾಗಲೇ ಅದರ ಅರಿವು.

ಎಂದು ದುಗ್ಗಾಣಿಯ ದುಷ್ಪರಿಣಾಮಗಳನ್ನು ಈ ಕೃತಿಯಲ್ಲಿ ತಿಳಿಸಿದ್ದಾರೆ.

******